ಓ.ಎಸ್.ನಂ. **144/2010**

ಡಿ.ಡಬ್ಲೂ-**4**

ದಿನಾಂಕಃ**31.05.2024** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ವಾದಿ ಪರ ಶ್ರೀ ಎಮ್.ಬಿ.ಸಿ ವಕೀಲರಿಂದಃ**

| | |
|---|---|
| ಸಾಕ್ಷಿಯ ಹೆಸರು | ರಮೇಶ |
| ತಂದೆ/ಗಂಡನ ಹೆಸರು | ಬಸವಶೆಟ್ಟಿ |
| ವಯಸ್ಸು | 49 ವರ್ಷ |
| ಕೆಲಸ | ವ್ಯವಸಾಯ |
| ವಾಸಸ್ಥಳ | ತರಿಕಲ್ ಗ್ರಾಮ |

ನಮ್ಮ ತಂದೆಯವರು 1999 ರಲ್ಲಿ ಜಮೀನನ್ನು ತರಿಕಲ್ ಗ್ರಾಮ, ಹುಣಸೂರು ತಾಲ್ಲೂಕು, ಬಳಿಕೆರೆ ಹೋಬಳಿ, ಸ.ನಂ.42 ರಲ್ಲಿ 1 ಎಕರೆ 16 ಗುಂಟೆ ಜಮೀನನ್ನು ಕ್ರಯಕ್ಕೆ ಪಡೆದಿರುತ್ತಾರೆ. ಸದರಿ ಅಸಲು ಕ್ರಯ ಪತ್ರ ನಮ್ಮ ತಂದೆ ಮರಣ ಹೊಂದಿರುವ ಕಾರಣ ನಾನು ಎಷ್ಟು ಹುಡಿದರೂ ನನಗೆ ಸಿಕ್ಕಿರುವುದಿಲ್ಲ . ಸದರಿ ಜಮೀನನ್ನು ನಮ್ಮ ತಂದೆಯವರು ಪ್ರತಿವಾದಿ 2 ರವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಸಾಕ್ಷಿಗೆ ಅವರ ತಂದೆಯವರು ಖರೀದಿಸಿದಂತಹ ದೃಢೀಕೃತ ಕ್ರಯ ಪತ್ರವನ್ನು ತೋರಿಸಲಾಗಿ ಅದನ್ನು ನೋಡಿ ಗುರಿಸಿದ್ದು ಅದನ್ನು ನಿಡಿ-36 ಎಂದು ಗುರುತಿಸಲಾಯಿತು.

**ಆದ್ದರಿಂದ ದಾವೆಯನ್ನು ವಜಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.**

**ಪಾಟೀಸವಾಲು ವಾದಿ ಪರ ಶ್ರೀ ಎನ್.ಕೆ ವಕೀಲರಿಂದ**

2 ನೇ ಪ್ರತಿವಾದಿಯವರಿಗೆ ನಮ್ಮ ತಂದೆಯವರು ಕ್ರಯಕ್ಕೆ ಪಡೆದ ಜಮೀನು ಹೇಗೆ ಬಂತು ಎಂದರೆ ನನಗೆ ಗೊತ್ತಿಲ್ಲ. ಮುಂದುವರೆದು 2 ನೇ ಪ್ರತಿವಾದಿಯವರ ಹೆಸರಿನಲ್ಲಿ ಇತ್ತು ಎಂದು ನುಡಿಯುತ್ತಾರೆ. ಸದರಿ ಬಗ್ಗೆ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿ. ನಮ್ಮ ತಂದೆಯವರು ಮಾಡಿದ ವ್ಯವಹಾರ ಆದಕಾರಣ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಕ್ರಯ ಪತ್ರವನ್ನು ಯಾರು ಬರೆದಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಯಾರು ಯಾರು ಸಾಕ್ಷಿದಾರರು ಇದ್ದರು ಎಂದರೆ ಸಾಕ್ಷಿ ಬಿಂದೇಗೌಡರು ಎಂದು ನುಡಿಯತ್ತಾರೆ. ಖರೀದಿ ಎಷ್ಟು ಹಣಕ್ಕೆ ಆಗಿರುತ್ತದೆಂದು ನನಗೆ ಗೊತ್ತಿಲ್ಲ. ಮುಂದುವರೆದು 1 ಲಕ್ಷ 5 ಸಾವಿರಕ್ಕೆ ಆಗಿರಬಹುದು ಎಂದು ನುಡಿಯುತ್ತಾರೆ.

3 ನೇ ಪ್ರತಿವಾದಿ ನನ್ನ ಚಿಕ್ಕವಯಸ್ಸಿನಿಂದಲೂ ಪರಿಚಯ. ಈ ದಾವೆಯ ಬಗ್ಗೆ ಹಾಗೂ ಕ್ರಯ ಪತ್ರದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ 3 ನೇ ಪ್ರತಿವಾದಿಯ ಮಾತು ಕೇಳಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.